# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 283 | Pages. 2 | Date: 30-09-2025, TUESDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 283 – ಪುಟಗಳು : 2 | 30-09-2025 ಮಂಗಳವಾರ | Ph: 8762954248 | ದರ : ₹1


# ಸಿಬ್ಬಂದಿ ಸತ್ತರೆ ನೌಕರಿ-ರೈತರಿಗೆ ಮಾತ್ರ ಪರಿಹಾರ

## ಜಿಲ್ಲಾಧಿಕಾರಿ ಎದುರು ಸಮಸ್ಯೆ ಹೇಳಿಕೊಂಡ ಗ್ರಾಮಸ್ಥರು | ಆತ್ಮವಿಶ್ವಾಸ ನಿರ್ಮಾಣ ಕಾರ್ಯಾಗಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಡಾನೆ ಹಾವಳಿಯಿಂದ ಅರಣ್ಯ ಇಲಾಖೆ ಸಿಬ್ಬಂದಿ ಮೃತಪಟ್ಟರೆ ಪರಿಹಾರದ ಜೊತೆಗೆ ಅನುಕಂಪ ಆಧಾರದಡಿ ಕುಟುಂಬಸ್ಥರಿಗೆ ಪರಿಹಾರ ಕೊಡುತ್ತೀರಿ. ಅದೇ ರೈತರು ಸತ್ತರೆ ಕೇವಲ ಪರಿಹಾರ ಮಾತ್ರ. ಈ ರೀತಿಯ ತಾರತಮ್ಯ ಏಕೆ..

ಜಿಲ್ಲಾಡಳಿತ ಮತ್ತು ಅರಣ್ಯ ಇಲಾಖೆ ವತಿಯಿಂದ ಬೇಲೂರು ತಾಲ್ಲೂಕಿನ ಅರೇಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಆತ್ಮ ವಿಶ್ವಾಸ ನಿರ್ಮಾಣ ಕಾರ್ಯಾಗಾರದಲ್ಲಿ ಸ್ಥಳೀಯರಿಂದ ಈ ರೀತಿಯ ಆಕ್ಷೇಪಗಳು ವ್ಯಾಪಕವಾಗಿ ಕೇಳಿಬಂದವು.

ಕಾಡಾನೆಗಳಿಂದ ಶೇ.90 ರಷ್ಟು ಕೂಲಿ ಕಾರ್ಮಿಕರಿಗೆ ತೊಂದರೆ ಆಗುತ್ತಿದೆ. ಜಿಲ್ಲಾಧಿಕಾರಿ ಅವರು ಕಾರ್ಮಿಕರು ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಕೆಲಸ ಮಾಡುವಂತೆ ಆದೇಶ ಮಾಡಿದ್ದರೂ ಇಂದಿಗೂ ಕೂಡ ಆದೇಶ ಜಾರಿಯಾಗಿಲ್ಲ. ಅದರ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿದರು.

ಆನೆಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಸಾವನ್ನಪ್ಪಿದರೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುತ್ತೀರಿ. ಆದರೆ ರೈತ ಸಾವನ್ನಪ್ಪಿದರೆ ಕೇವಲ ಪರಿಹಾರ ನೀಡುತ್ತೀರಿ. ಈ ತಾರತಮ್ಯ ತೊಡೆದು ಹಾಕಲು ಮನವಿ ಮಾಡಿದರು.

ಆನೆ ಹಾವಳಿಯಿಂದ ಉದೇವಾರ ಬೈಲಿನಲ್ಲಿ ಒಂದು ಕಾಳು ಭತ್ತ ಬೆಳೆಯಲು ಆಗುತ್ತಿಲ್ಲ. ಇಟಿಎಫ್ ಸಿಬ್ಬಂದಿ ಆನೆಗಳ ಚಲನವಲನ ಕುರಿತು ಸಮರ್ಪಕ ಮಾಹಿತಿ ನೀಡಬೇಕೆಂದು ಸ್ಥಳೀಯರು ಅವಲತ್ತುಕೊಂಡರು.

ಕಾಡಾನೆಗಳ ಓಡಿಸಲು ಪಟಾಕಿ ಸಿಡಿಸುತ್ತಾರೆ. ಆ ಕ್ಷಣಕ್ಕಷ್ಟೇ ಆನೆಗಳು ಇಲ್ಲಿಂದ ಕದಲುತ್ತವೆ. ಮತ್ತೆ ಮಾರನೇ ದಿನ ಹಾಜರಾಗುತ್ತವೆ. ಗ್ರಾಮಗಳಲ್ಲಿ ಸರಿಯಾದ ವಿದ್ಯುತ್ ಸಂಪರ್ಕವಿಲ್ಲ. ಸೋಲಾರ್ ಯೋಜನೆ ವಿಸ್ತರಿಸಬೇಕು. ಬಂಡಿಹಳ್ಳಿ ವ್ಯಾಪ್ತಿಯಲ್ಲಿ 177 ಎಕರೆಯಲ್ಲಿ ನೀಲಗಿರಿ ಅಕೇಶಿಯ ಗಿಡಗಳಿವೆ. ಆನೆಗಳಿಗೆ ಮೇವು ಸಿಗುವ ಹಲಸು, ಬಿದಿರು, ನೇಪಿಯರ್ ಹುಲ್ಲುಗಳನ್ನು ಬೆಳೆಸಬೇಕೆಂದು ಸಲಹೆ ನೀಡಿದರು.



ಜಿಲ್ಲಾಡಳಿತ ಕಾರ್ಯೋನ್ಮುಖ

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಜಿಲ್ಲೆಯ ಜಲ್ವಂತ ಸಮಸ್ಯೆಗಳಲ್ಲಿ ಒಂದಾದ ಮಾನವ-ಕಾಡು ಪ್ರಾಣಿ ಸಂಘರ್ಷ ತಡೆ ಉದ್ದೇಶದಿಂದ ಇದುವರೆಗೆ ನಾಲ್ಕು ಸಭೆ ನಡೆಸಿದ್ದು ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು.

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಸೇವೆ ಸಲ್ಲಿಸುವುದು ಸವಾಲಿನ ಕೆಲಸ. ಪ್ರತಿ ತಿಂಗಳಲ್ಲಿ ಎರಡು ಗುರುವಾರ ಸಭೆ ಮಾಡುತ್ತಿದ್ದೇವೆ. ಅದರಿಂದ ನಮಗೆ ಬಹಳ ಮಾಹಿತಿಗಳು ದೊರೆಯುತ್ತಿವೆ. 2018 ರಿಂದ ಇತ್ತೀಚೆಗೆ ಕಾಡಾನೆ ಮಾನವ ಸಂಘರ್ಷ ಹೆಚ್ಚಾಗಿರುವುದನ್ನು ಗಮನಿಸಿದ್ದೇನೆ. ಅರಣ್ಯ ಇಲಾಖೆ ಅಧಿಕಾರಿಗಳು ಸಮಗ್ರ ಕ್ರಿಯಾಯೋಜನೆ ಸಿದ್ಧಪಡಿಸಿ ಪರಿಹಾರಕ್ಕೆ ಪಣ ತೊಟ್ಟಿದ್ದಾರೆಂದರು.

ಪ್ರಜೆಗಳಿಗೆ ನಂಬಿಕಾರ್ಹ ಆತ್ಮವಿಶ್ವಾಸ ಇರಬೇಕು. ಸಭೆಯಲ್ಲಿ ತಾವು ಅನುಭವಿಸುತ್ತಿರುವ ನೋವು ಹೇಳಿಕೊಂಡಿದ್ದಿರಿ. ಸಮಸ್ಯೆಗಳ ಆಳವನ್ನು ಅರಿಯಲು ಅಧಿಕಾರಿಗಳು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಮಾತ್ರ ಸಮಸ್ಯೆಗಳ ತೀವ್ರತೆ ಅರಿತು ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕೆಳ ಹಂತದವರು ನೀಡುವ ಮಾಹಿತಿಯನ್ನು ಪರಿಗಣಿಸದೆ ಖುದ್ದು ಸ್ಥಳಕ್ಕೆ ಭೇಟಿ ನೀಡುವಂತೆ ಸೂಚಿಸಿದ್ದೇನೆ ಎಂದರು.

ಅರೇಹಳ್ಳಿಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕೂಡಲೆ ವೈದ್ಯರ ನಿಯೋಜನೆಗೆ ಕ್ರಮ ವಹಿಸಲಾಗುವುದು. ಇಲ್ಲಿ ಮೊಬೈಲ್ ಟವರ್ ಇಲ್ಲದೆ ನೆಟ್‌ವರ್ಕ್ ಸಮಸ್ಯೆಇದೆ. ಅದಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದಂತೆ ಕ್ರಮ ವಹಿಸುವುದರ ಜೊತೆಗೆ ಸುರಕ್ಷತೆಗೆ ಆದ್ಯತೆ ನೀಡಬೇಕು. ಅರಣ್ಯ ಇಲಾಖೆ, ಕೆಎಸ್‌ಆರ್‌ಟಿಸಿ ಜೊತೆ ಸೇರಿ



ಕೆಲಸ ಮಾಡಬೇಕು. ಯಾವ ಇಲಾಖೆ ಯಾವ ಕೆಲಸ ಮಾಡಬೇಕೆಂಬ ಪಟ್ಟಿ ಸಿದ್ಧಪಡಿಸಲಾಗಿದೆ. ಕೂಲಿ ಕಾರ್ಮಿಕರಿಗೆ ತೊಂದರೆ ಆಗದಂತೆ ಇ-ಶ್ರಮ್ ಕಾರ್ಡ್, ಎಬಿಆರ್‌ಕೆ ಕಾರ್ಡ್‌ಗಳಿಲ್ಲದೆ ಸರ್ಕಾರದ ಸವಲತ್ತುಗಳು ದೊರೆಯುತ್ತಿಲ್ಲ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಿ ಎಂದರಲ್ಲದೆ, ಆರೋಗ್ಯ, ತೋಟಗಾರಿಕೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೃಷಿ ಇಲಾಖೆ ಅಧಿಕಾರಿಗಳು ಸೇರಿ ತಮ್ಮ ವ್ಯಾಪ್ತಿಯ ಸಮಸ್ಯೆಗೆ ಪರಿಹಾರ ಕಲ್ಪಿಸಲು ಜವಾಬ್ದಾರಿ ವಹಿಸಬೇಕೆಂದರು.

### ಡ್ರೋನ್-ಎಐ ಕ್ಯಾಮರಾ ಮೊರೆ

ಅರಣ್ಯ ಸಂರಕ್ಷಣಾಧಿಕಾರಿ ಏಡುಕುಂಡಲು ಮಾತನಾಡಿ, ಜಿಲ್ಲೆಯಲ್ಲಿ 15-20 ವರ್ಷಗಳಿಂದ ಆನೆಗಳ ಹಾವಳಿ ಇದೆ. ಆದರೆ ಈ ಭಾಗದಲ್ಲಿ 4-5 ವರ್ಷಗಳಿಂದ ಹಾವಳಿ ಹೆಚ್ಚಾಗಿದೆ. ಕಾಫಿ ಮತ್ತು ಇತರೆ ಬೆಳೆಗಳು ನಷ್ಟವಾಗುತ್ತಿದೆ. ಇಲ್ಲಿಯ ಸಮಸ್ಯೆಅರ್ಥ ಮಾಡಿಕೊಂಡಿದ್ದೇವೆ. ಸಮಸ್ಯೆ ಪರಿಹಾರಕ್ಕೆ ಸತತ ಪ್ರಯತ್ನ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಭದ್ರಾದಲ್ಲಿ ಸಾಫ್ಟ್ ರೀಲಿಫ್ ಕೇಂದ್ರ ತೆರೆಯುತ್ತಿದ್ದು ವರ್ಷದೊಳಗೆ ಕೆಲಸ ಮುಗಿಯಲಿದೆ ಎಂದು ಭರವಸೆ ನೀಡಿದರು.

ತಾತ್ಕಾಲಿಕವಾಗಿ ಸಮಸ್ಯೆಗಳನ್ನು ಬಗೆಹರಿಸಲು ಡ್ರೋನ್ ಮತ್ತು ಕೃತಕ ಬುದ್ಧಿಮತ್ತೆ ಕ್ಯಾಮರಾ ಬಳಸಿ ಆನೆಗಳನ್ನು ಹಿಮ್ಮೆಟ್ಟಿಸಲು 140 ಇಟಿಎಫ್ ಸಿಬ್ಬಂದಿ ಕಾರ್ಯಪ್ರವೃತ್ತರಾಗಿದ್ದಾರೆ. ಆನೆ ಹಾವಳಿಯಿಂದ ಸಾವು-ನೋವುಗಳಾಗಿ ಪರಿಹಾರ ಬಿಟ್ಟು ಹೋಗಿರುವುದನ್ನು ಪರಿಶೀಲಿಸಿ ಒದಗಿಸಲಾಗುವುದು. ಭಾಗಶಃ ಅಂಗವಿಕಲತೆ ಆಗಿರುವವರಿಗೂ ಪರಿಹಾರ ನೀಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ರಸ್ತೆಯ ತಿರುವುಗಳಲ್ಲಿ ವಿದ್ಯುತ್ ದೀಪಗಳಿಲ್ಲದೆ, ಸಮಸ್ಯೆಆಗುತ್ತಿರುವುದನ್ನು ಸರಿಪಡಿಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯೊಂದಿಗೆ ಚರ್ಚಿಸಿ ಸಮನ್ವಯದಿಂದ ಸಮಸ್ಯೆ ಬಗೆಹರಿಸಲಾಗುವುದು. ಅಕೇಶೀಯ ಮತ್ತು ನೀಲಗಿರಿ ಗಿಡಗಳನ್ನು ತೆಗೆಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಉಪ ವಿಭಾಗಾಧಿಕಾರಿ ರಾಜೇಶ್, ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಷರೀಫ್, ಚೇತನ್ ಕುಮಾರ್ ಮತ್ತಿತರರು ಹಾಜರಿದ್ದರು.

## ಸಾಮಾಜಿಕ-ಶೈಕ್ಷಣಿಕ ಗಣತಿಯಿಂದ ಪ್ರಯೋಜನವಿಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರದ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯಿಂದ ಯಾರಿಗೂ ಯಾವ ಪ್ರಯೋಜನವಿಲ್ಲ. ಜನರ ದಿಕ್ಕು ತಪ್ಪಿಸುವ ಕೆಲಸವಷ್ಟೇ ಎಂದು ಶಾಸಕ ಎ. ಮಂಜು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಸರ್ಕಾರದ ಈ ಕ್ರಮದಿಂದ ಏನಾದರೂ ಬದಲಾವಣೆಯಾಗುತ್ತದೆ ಎಂಬುದೆಲ್ಲ ಸುಳ್ಳು. ಜಾತಿ ಗಣತಿ ನಡೆಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ಸಮೀಕ್ಷೆಯಲ್ಲಿ ಜಾತಿ ಬಗ್ಗೆ ಹೆಚ್ಚು ಚರ್ಚೆ ಆಗುತ್ತಿದೆ. ಜನರು ಅವರಿಗೆ ಇಷ್ಟದ ಜಾತಿ ನಮೂದಿಸಬುಹುದು ಎಂದರು.

ರಾಜ್ಯ ಸರ್ಕಾರದಲ್ಲಿ ರಸ್ತೆ ಗುಂಡಿ ಮುಚ್ಚಲು ಕೂಡ ಅನುದಾನವಿಲ್ಲ. ಎಲ್ಲಾ ಕಡೆ ರಸ್ತೆಗಳು ಗುಂಡಿಬಿದ್ದಿ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಸರ್ಕಾರ ಜನರಿಗೆ ಮೂಲಭೂತವಾಗಿ ಅವಶ್ಯಕತೆ ಇರುವ ರಸ್ತೆ, ಆಸ್ಪತ್ರೆ, ಶಾಲೆ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ. ಹಾಗು ಬೇರೆ ಪಕ್ಷದ ಶಾಸಕರಿಗೆ 25 ಕೋಟಿ ರೂ. ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಈ ವರೆಗೆ ಹಣ ಬಿಡುಗಡೆ ಆಗಿಲ್ಲವೆಂದರು.

ಅ.2ಕ್ಕೆ ದಸರಾ ಉದ್ಘಾಟನೆ:

ಅರಕಲಗೂಡಿನಲ್ಲಿ ಅ. 2ರ ಗುರುವಾರ ಸಂಜೆ




4 ಗಂಟೆಗೆ ದಸರಾ ಉತ್ಸವ ಹಮ್ಮಿಕೊಂಡಿದ್ದು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ದೀಪಾ ಭಾಸ್ತಿ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಲಿದ್ದು ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸುವರು. ಮೈಸೂರು ದಸರಾ ಉದ್ಘಾಟನೆಗೆ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ ರಾಜ್ಯ ಸರ್ಕಾರ ಕೃತಿ ಅನುವಾದಕಿ ದೀಪಾ ಭಾಸ್ತಿ ಅವರನ್ನು ಕರೆಯಬೇಕಿತ್ತು. ಮೈಸೂರು ದಸರಾ ಉದ್ಘಾಟನೆಗೆ ದೀಪಾ ಭಾಸ್ತಿ ಅವರನ್ನು ಆಹ್ವಾನಿಸಲಿಲ್ಲವೆಂಬ ಕಾರಣಕ್ಕೆ ಅರಕಲಗೂಡು ದಸರಾ ಉದ್ಘಾಟನೆಗೆ ನಾವು ಆಹ್ವಾನಿಸಿದ್ದೇವೆ. ಬಾನು ಮುಷ್ತಾಕ್ ಅವರ ಕನ್ನಡ ಕೃತಿಯನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದರಿಂದ ಜಿಲ್ಲೆಗೆ ಬೂಕರ್ ಪ್ರಶಸ್ತಿ ಬಂದಿದೆ. ಹಾಗಾಗಿ ಅವರನ್ನು ದಸರಾ ಉದ್ಘಾಟಕರನ್ನಾಗಿ ಆಹ್ವಾನಿಸಿದ್ದೇವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಈ ಹಿಂದೆ ನಿಸ್ಸಾರ್ ಅಹಮ್ಮದ್ ಅವರು ಮೈಸೂರು ದಸರಾ ಉದ್ಘಾಟನೆ ಮಾಡಿದ ಸಂದರ್ಭದಲ್ಲಿ ವಿವಾದ ಆಗಲಿಲ್ಲ. ಆದರೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದಾಗ ವಿವಾದ ಯಾಕಾಯಿತು ಎಂಬುದನ್ನು ಯೋಚಿಸಬೇಕು. ಬಾನು ಮುಷ್ತಾಕ್ ಬಗ್ಗೆ ನಮಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಈ ಹಿಂದೆ ನಡೆದ ಕಾರ್ಯಕ್ರಮವೊಂದರಲ್ಲಿ ಕುಂಕುಮ, ಬಳೆ ಕುರಿತು ಅವರು ವಿವಾದಾತ್ಮಕ ರೀತಿಯಲ್ಲಿ ಮಾತನಾಡಿದ್ದರು. ಹಾಗಾಗಿ ಗೊಂದಲ ಸೃಷ್ಟಿಯಾಯಿತು. ಈಗಲೂ ಅವರು ಒಪ್ಪಿಕೊಂಡರೆ ಅರಕಲಗೂಡು ದಸರಾ ಉದ್ಘಾಟನೆಗೆ ಆಹ್ವಾನಿಸುವುದಾಗಿ ತಿಳಿಸಿದರು.

ಅ.2ರ ಸಂಜೆ 4 ಗಂಟೆಗೆ ಪಟ್ಟಣದ ದೊಡ್ಡಮ್ಮ ದೇವಸ್ಥಾನದಿಂದ ಬನ್ನಿ ಮಂಟಪದ ವರೆಗೆ ಭವ್ಯ ಮೆರವಣಿಗೆ ನಡೆಯಲಿದೆ. ತಹಶೀಲ್ದಾರ್ ಕೆ.ಸಿ. ಸೌಮ್ಯ ಅವರು ಕದಳಿ ವೃಕ್ಷ ಛೇದನ ಮಾಡುವರು. ಶ್ರೀ ದೊಡ್ಡಮ್ಮ ಸೇವಾ ಸಮಿತಿ ಅಧ್ಯಕ್ಷ ಎ.ಎಸ್. ರಾಮಸ್ವಾಮಿಗೆ ದಸರಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. ದಸರಾ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

## ನಂಜಮ್ಮ ಮಹಿಳಾ ಸಮಾಜದ ವಿರುದ್ಧ ನಿರಾಧಾರ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ನಂಜಮ್ಮ ಮಹಿಳಾ ಸಮಾಜದ ವಿರುದ್ಧ ಅರ್ಚನಾ ಜಯಂತ್ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದವು ಎಂದು ಸಮಾಜದ ಅಧ್ಯಕ್ಷೆ ಕೌಶಲ್ಯ ಲಕ್ಷ್ಮಣಗೌಡ ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿ, ನಂಜಮ್ಮ ಮಹಿಳಾ ಸಮಾಜವು ಸ್ಥಾಪನೆಯ ಉದ್ದೇಶಕ್ಕೆ ತಕ್ಕಂತೆ ಇಂದಿನ ಆಡಳಿತ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಸರ್ವರಿಗೂ ಸದ್ಯಸತ್ವ ದೊರೆಯುತ್ತಿದೆ. ಮಹಿಳಾಪರ ಕಾರ್ಯಚಟುವಟಿಕೆಗಳು ನಡೆಯುತ್ತಿವೆ. ಮಹಿಳಾ ದಿನಾಚರಣೆ, ಸ್ವಾತಂತ್ರ್ಯ ದಿನಾಚರಣೆ, ವಿಶೇಷ ಪೂಜೆಗಳು ಸೇರಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಅವರು ತಿಳಿಸಿದರು.

ನಂಜಮ್ಮ ಮಹಿಳಾ ಸಮಾಜವು ತನ್ನ ಬೈಲಾ ಅಡಿಯಲ್ಲಿ ಕಾರ್ಯ




ನಿರ್ವಹಿಸುತ್ತಿದೆ. ಆರ್ಥಿಕ ಲೆಕ್ಕಾಚಾರಗಳಿಗೆ ಸಂಬಂಧಿಸಿ ಆಡಿಟ್ ಮಾಡಿಸಿ ಸಹಕಾರ ಸಂಘಕ್ಕೆ ಸಲ್ಲಿಸಲಾಗಿದೆ.

ಮಾಹಿತಿ ಹಕ್ಕಿನಡಿ ಅರ್ಚನಾ ಜಯಂತ್ ಕೇಳಿರುವ ಮಾಹಿತಿಯನ್ನು ನೀಡುವುದಿಲ್ಲ. ಏಕೆಂದರೆ ಅದಕ್ಕೆ ನಮ್ಮ ಸದಸ್ಯರ ಒಪ್ಪಿಗೆ ಇಲ್ಲ. ಸರ್ವ ಸದಸ್ಯರ ಸಭೆಯಲ್ಲಿ ಮಾತ್ರ ಮಾಹಿತಿಯನ್ನು ನೀಡಲಾಗುವುದು ಎಂದು ಅವರು ಹೇಳಿದರು.

ಒಂದು ಸುಂದರ ಕಟ್ಟಡ ನಿರ್ಮಾಣವಾಗಬೇಕೆಂಬುದು ನಮ್ಮ ಕನಸಾಗಿದೆ, ಅದಕ್ಕೆ ಆರ್ಥಿಕ ಮೂಲಗಳ ಕೊರತೆಯಿದೆ. 15 ವರ್ಷಗಳ ಹಿಂದೆ 25 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡದ ದುರಸ್ತಿ ಕಾರ್ಯ ನಡೆದಿತ್ತು. ಅದಾದ ನಂತರ ಮತ್ತೆ 2 ಲಕ್ಷ ರೂ. ವೆಚ್ಚ ಮಾಡಲಾಗಿದೆ. ಆದರೂ ಕಟ್ಟಡವು ಇನ್ನೂ ಉತ್ತಮ ಸ್ಥಿತಿಯಲ್ಲಿ ಇಲ್ಲ ಎಂದು ಅವರು ತಿಳಿಸಿದರು.

ಶೈಲಾ ರವಿಕುಮಾರ್ ಅವರು ಹಾಲಿ ಸದಸ್ಯರಾಗಿದ್ದಾರೆ. ಇತ್ತೀಚೆಗೆ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಅವರು ಬಹುಮಾನ ಗಳಿಸಿದ್ದಾರೆ. ಸಮಾಜದಲ್ಲಿ 120 ಸದಸ್ಯರಿದ್ದಾರೆ, ಇವರಲ್ಲಿ 60 ಜನ ಮಾತ್ರ ಸದಸ್ಯತ್ವವನ್ನು ನವೀಕರಿಸಿದ್ದಾರೆ. ಉಳಿದವರು ನವೀಕರಣ ಮಾಡಿಲ್ಲ ಎಂದು ಅವರು ಹೇಳಿದರು.

ಮಹಿಳಾ ಸಮಾಜದ ಉಪಾಧ್ಯಕ್ಷೆ ಶೋಭಾ ಮಂಜುನಾಥ್, ಕಾರ್ಯದರ್ಶಿ ಸುಪ್ರಿಯಾ ರತನ್, ಖಜಾಂಚಿ ನಿರ್ಮಲಾ ಪವಿತ್ರನ್, ಸಹ ಕಾರ್ಯದರ್ಶಿ ಸವಿತಾ ವಿಷ್ಣುಮೂರ್ತಿ, ಸದಸ್ಯರಾದ ರಾಗಿಣಿ ನಾಯ್ಡು, ಜ್ಯೋತಿ ನಂದನ್ ಉಪಸ್ಥಿತರಿದ್ದರು.

## ಬಸವೇಶ್ವರ ಪ್ರತಿಮೆಗೆ ಪಾಲಿಕೆ ಮೇಯರ್ ಸಹಮತ



ಹಾಸನ: ವಿಶ್ವಗುರು ಬಸವಣ್ಣ ಅವರ ಪ್ರತಿಮೆ ನಿರ್ಮಾಣಕ್ಕೆ ನಗರದಲ್ಲಿ ಜಾಗ ಕಲ್ಪಿಸಬೇಕೆಂದು ಮಹಾನಗರ ಪಾಲಿಕೆ ಮೇಯರ್ ಗಿರೀಶ್ ಚನ್ನವೀರಪ್ಪ ಅವರಿಗೆ ವೀರಶೈವ ಲಿಂಗಾಯತ ಸಮುದಾಯದಿಂದ ಮನವಿ ಮಾಡಲಾಯಿತು.

ಸೆ. 21 ರಂದು ನಗರದಲ್ಲಿ ಹಮ್ಮಿಕೊಂಡಿದ್ದ ಬಸವ ಸಂಸ್ಕೃತಿ ಅಭಿಯಾನ ಯಶಸ್ಸಿಗೆ ಸಹಕರಿಸಿದವರಿಗೆ ತಣ್ಣೀರುಹಳ್ಳ ಮಠದಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಸಮಾಜದ ಮುಖಂಡರು ಮನವಿ ಮಾಡಿದರು.

ಮೇಯರ್ ಗಿರೀಶ್ ಚನ್ನವೀರಪ್ಪ ಮಾತನಾಡಿ, ಮಹಾನಗರ ಪಾಲಿಕೆ ಕಚೇರಿ ಸಮೀಪ ಬಸವ ವೃತ್ತ ಇದೆ. ಅಲ್ಲಿಯೇ ಶ್ರೀ ಜಗಜ್ಯೋತಿ ಬಸವೇಶ್ವರರ ಅಶ್ವರೂಢ ಬಸವೇಶ್ವರ ಪ್ರತಿಮೆ ಸ್ಥಾಪಿಸಬಹುದು. ಬಸವೇಶ್ವರರು ಎಲ್ಲಾ ಸಮಾಜಕ್ಕೆ ಬೇಕಾದವರು. ಬಸವಣ್ಣ ಸಮಾನತೆ ಸಾರಿದವರು, ಮೇಲು ಕೀಳು ಎಂಬ ಭಾವನೆ ಇಲ್ಲದೆ ಎಲ್ಲಾ ಸಮಾಜದವರಿಗೆ ನ್ಯಾಯ ದೊರಕಿಸಿಕೊಟ್ಟು ಗೌರವ ನೀಡಿದ ಮಹಾನ್ ನಾಯಕನ ಪ್ರತಿಮೆ ನಿರ್ಮಾಣಕ್ಕೆ ಸಹಕರಿಸುವುದು ನಮ್ಮ ಕರ್ತವ್ಯ ಎಂದರು.

ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಕೊಳಗುಂದ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಮಾಡಾಳು ಮಠದ ಶ್ರೀ ರುದ್ರಮುನಿ ಸ್ವಾಮಿಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಾಹಾಸಭೆ ಕೇಂದ್ರ ಸಮಿತಿ ಸದಸ್ಯ ಗ್ರಾನೈಟ್ ರಾಜಶೇಖರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ವಿವಿಧ ತಾಲ್ಲೂಕು ಅಧ್ಯಕ್ಷರಾದ ಕಟ್ಟಾಯ ಶಿವಕುಮಾರ್, ಚಿಕ್ಕಕಣಗಾಲು ಅಜಿತ್, ಅಡಗೂರು ಬಸವರಾಜ್ ಹಾಗೂ ಇತರರಿದ್ದರು.

## ನೀರಾವರಿ ಯೋಜನೆಗೆ ಸರ್ಕಾರದ ನಿರಾಸಕ್ತಿ: ರೇವಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ವಿವಿಧ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ ಹಣ ನೀಡುತ್ತಿಲ್ಲ, ಆಸಕ್ತಿಯನ್ನೂ ತೋರಿಸುತ್ತಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಆರೋಪಿಸಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿ, ಕಾಚೇನಹಳ್ಳಿ ಏತ ನೀರಾವರಿ ಮೊದಲ ಹಂತ, ಎರಡನೇ ಹಂತ ಕಾಮಗಾರಿಗೆ ಹಿಂದೆ ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ 165 ಕೋಟಿ ರೂ. ನೀಡಿದರು. ನಂತರ ಕೆಲವರು ಬಂದು ಉದ್ಘಾಟನೆ ಮಾಡಿ ಭಾಷಣ ಮಾಡಿ ಹೋದರು, ಅಲ್ಲಿಂದ ಇಲ್ಲೀವರೆಗೂ ಏನೂ ಆಗಿಲ್ಲ ಎಂದು ದೂರಿದರು.

ಹಾಗೆಯೇ ಆಲಗೋಡನಹಳ್ಳಿ ಲಿಫ್ಟ್ ಇರಿಗೇಷನ್ ಮೂಲಕ 26 ಕೆರೆಗಳಿಗೆ ನೀರು ತುಂಬಿಸಲು 47 ಕೋಟಿ ರೂ.ಗಳನ್ನು 2019 ರಲ್ಲೇ



ಕೊಡಿಸಲಾಯಿತು. ಶಂಭುಗೌಡನ ಕೆರೆಗೆ 21 ಕೋಟಿ ಹಣ ನೀಡಲಾಗಿದೆ. ಒಂಟಿ ಪುರದಿಂದ ಚಾಕೇನಹಳ್ಳಿ ಡ್ಯಾಂಗೆ 22 ಕೋಟಿ ಹಣ ಕೊಟ್ಟಿದೆ. ಇದೆಲ್ಲಾ ಮಾಡಿ ಆರು ವರ್ಷವಾಯ್ತು, ಅಲ್ಲಿಂದ ಇಲ್ಲಿಯವರೆಗೂ ಏನೂ ಆಗಿಲ್ಲ ಎಂದು ಆಕ್ರೋಶ ಹೊರ ಹಾಕಿದರು.

ನಾವು ರೈತರ ಪರ, ನಮ್ಮದು ರೈತ ಪರವಾದ ಸರ್ಕಾರ ಎನ್ನುತ್ತಾರೆ, ಜಿಲ್ಲಾಧಿಕಾರಿ ಖಾತೆಗೆ ದುಡ್ಡು ಬಂದರೂ ಪರಿಹಾರ ಕೊಡದೆ ಇಟ್ಕಂಡು ಎಸ್‌ಎಲ್‌ಓ ಕಚೇರಿಗೆ ಅಲೆಸುತ್ತಿದ್ದಾರೆ ಎಂದು ಸಿಟ್ಟಾದರು.

ಎಸ್‌ಎಲ್‌ಓ ಕಚೇರಿ ಜಿಲ್ಲಾಧಿಕಾರಿ ಅಧೀನದಲ್ಲಿದೆ, ಜಿಲ್ಲಾಧಿಕಾರಿ ವಾರಕ್ಕೊಂದು ಸಭೆ ನಡೆಸುತ್ತಿದ್ದಾರೆ. ಎಷ್ಟು ಅರ್ಜಿದಾರರ ಅರ್ಜಿಗಳು ಬಗೆಹರಿದಿವೆ, ಎಸ್‌ಎಲ್‌ಓ ಕರೆಸಿ ಹಳೆಯ ಅರ್ಜಿಗಳನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದರು.

## ಹೊಳೆನರಸೀಪುರದಲ್ಲಿ ಗಣೇಶ ವಿಸರ್ಜನೆ ಸಂಭ್ರಮ

ಹೊಳೆನರಸೀಪುರ: ಶ್ರೀ ಮಹಾ ಗಣಪತಿ ಮಹೋತ್ಸವ ಸೇವಾ ಸಮಿತಿ ವತಿಯಿಂದ 68ನೇ ವರ್ಷದ ಗಣಪತಿ ವಿಸರ್ಜನಾ ಮಹೋತ್ಸವ ಸಾಂಪ್ರದಾಯಿಕವಾಗಿ ನೆರವೇರಿತು.

ಶ್ರೀ ಮಹಾಗಣಪತಿ ಅವರನ್ನು ಸಂಜೆ ಹೂವಿನಿಂದ ಅಲಂಕರಿಸಿದ ಭವ್ಯ ವಾಹನದಲ್ಲಿರಿಸಿ, ಮಂಗಳ ವಾದ್ಯಗಳೊಂದಿಗೆ, ವೀರಗಾಸೆ, ಚಂಡೆ ಮದ್ದಳೆ, ಕೀಲುಕುದುರೆ, ಕೋಲಾಟ, ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳ ಕಲಾ ಪ್ರದರ್ಶನದ ಜೊತೆಯಲ್ಲಿ, ಕಣ್ಮನ ಸೆಳೆಯುವ ಪಟಾಕಿಯೊಂದಿಗೆ ಸೇವಾ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ಭಕ್ತಾದಿಗಳ ಉಪಸ್ಥಿತಿಯಲ್ಲಿ ಸಕಲ ರಾಜ ಮರ್ಯಾದೆಯೊಂದಿಗೆ ಪಟ್ಟಣದ ಪ್ರಮುಖ ರಸ್ತೆಯಲ್ಲಿ ಕೊಂಡೊಯ್ಯಲಾಯಿತು.

ಆಗಾಗ ವರುಣ ಸಿಂಚನವಾದರೂ ಭಕ್ತಾದಿಗಳು ವಿಚಲಿತರಾಗದೆ ಗಣಪತಿಯೊಂದಿಗೆ ಸಾಗಿದರು. ಕಳೆದ ಆ.27 ರಂದು ಪ್ರತಿಷ್ಠಾಪನೆ ಮಾಡಿದ್ದ ಮಹಾಗಣಪತಿಯನ್ನು ವಿಸರ್ಜಿಸಲಾಯಿತು.

ಒಂದು ತಿಂಗಳ ಕಾಲ ಗಣಪತಿ ಆಸ್ಥಾನ ಮಂಟಪದ ಸಾಂಸ್ಕೃತಿಕ ವೇದಿಕೆಯಲ್ಲಿ ಕಲಾವಿದರು ತಮ್ಮ ಕಲಾ ಪ್ರದರ್ಶನ ಅಭಿವ್ಯಕ್ತಿಗೊಳಿಸಿ ಕಲಾಭಿಮಾನಿಗಳ ಮನಸೂರೆಗೊಂಡರು.

ತೆಪ್ಪೋತ್ಸವದ ಮೂಲಕ ಪವಿತ್ರ ಹೇಮಾವತಿ ನದಿಯಲ್ಲಿ ಗಣೇಶನನ್ನು ವಿಸರ್ಜಿಸಲಾಯಿತು.

ಮಹಾಗಣಪತಿ ಮಹೋತ್ಸವ ಸೇವಾ ಸಮಿತಿ



ಗೌರವಾಧ್ಯಕ್ಷ ಸಮಾಜ ಸೇವಕ ಟಿ.ಶಿವಕುಮಾರ್, ಸಮಿತಿ ಅಧ್ಯಕ್ಷರು ಮತ್ತು ಪುರಸಭೆ ಅಧ್ಯಕ್ಷ ಹೆಚ್.ಕೆ.ಪ್ರಸನ್ನ, ಕಾರ್ಯಾಧ್ಯಕ್ಷ ಹೆಚ್. ಎಸ್.ಪುಟ್ಟಸೋಮಪ್ಪ, ಕೆ. ಶ್ರೀಧರ್, ಉಪಾಧ್ಯಕ್ಷರಾದ ಎ.ಜಗನ್ನಾಥ್, ರವಿಕುಮಾರ್, ಹೆಚ್. ಎಸ್.ಸುದರ್ಶನ್, ಪ್ರಧಾನ ಕಾರ್ಯದರ್ಶಿ ಜಿ.ಕೆ.ಸುಧಾ ನಳಿನಿ ದೊಡ್ಡಮಲ್ಲೇಗೌಡ, ವೈ.ವಿ.ಚಂದ್ರಶೇಖರ್, ಸಹ ಕಾರ್ಯದರ್ಶಿ ಹೆಚ್.ವಿ.ಸುರೇಶ್ ಕುಮಾರ್ ಇತರರಿದ್ದರು.

# ಜಿಲ್ಲೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ ಸುಸೂತ್ರ

## ಅ.7ರಂದು ಸಮೀಕ್ಷೆ ಪೂರ್ಣ | 4897 ಶಿಕ್ಷಕರಿಂದ ಕರ್ತವ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ವರ್ ಸಮಸ್ಯೆಯಿಂದ ಆರಂಭದಲ್ಲಿ ನಿಧಾನಗತಿಯಲ್ಲಿ ಸಾಗುತ್ತಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಕಳೆದ ಎರಡು ದಿನಗಳಿಂದ ಚುರುಕು ಪಡೆದಿದೆ.

ಸೆ. 22 ರಿಂದ ರಾಜ್ಯಾದ್ಯಂತ ಸಮೀಕ್ಷೆ ಪ್ರಾರಂಭಗೊಂಡಿತ್ತಾದರೂ ಸರ್ವರ್ ಇಲ್ಲದೆ ಸರ್ಕಾರ ಗೊತ್ತುಪಡಿಸಿದ ಆ್ಯಪ್ ತೆರೆದುಕೊಳ್ಳದೆ ಶಿಕ್ಷಕರು ರೋಸಿ ಹೋಗಿದ್ದರು. ಇದೇ ಪರಿಸ್ಥಿತಿ ಮುಂದುವರಿದರೆ ಅ. 7ರ ಗಡುವಿನೊಳಗೆ ಸಮೀಕ್ಷೆ ಪೂರ್ಣಗೊಳ್ಳುವುದು ಅನುಮಾನ ಎಂದು ಹೇಳಿದ್ದರು. ಆದರೆ ಶನಿವಾರ ಹಾಗು ಭಾನುವಾರ ಸರ್ವರ್ ಸಮಸ್ಯೆ ಬಗೆಹರಿದಿದ್ದು ಕೆಲಸ ಸರಾಗವಾಗಿದೆ. ಆ ಮೂಲಕ ಹಾಸನ ಜಿಲ್ಲೆಯಲ್ಲಿ ಇದುವರೆಗೆ 93,376 ಮನೆಗಳ ಸಮೀಕ್ಷೆ ಮುಕ್ತಾಯಗೊಂಡಿದ್ದು ಶೇ. 17.66 ರಷ್ಟು ಪೂರ್ಣಗೊಳಿಸಲಾಗಿದೆ. ರಾಜ್ಯದಲ್ಲೇ ಸರ್ವೆ ಪಟ್ಟಿಯಲ್ಲಿ ಜಿಲ್ಲೆಗೆ 13ನೇ ಸ್ಥಾನದಲ್ಲಿದೆ.

ಜಿಲ್ಲಾದ್ಯಂತ 5,34,339 ಮನೆಗಳಿಗೆ ಗಣತಿದಾರರು ಭೇಟಿ ನೀಡಬೇಕಿದೆ. ಅದಕ್ಕಾಗಿ 4,897 ಶಿಕ್ಷಕರ ನಿಯೋಜನೆ ಮಾಡಲಾಗಿದೆ. ಪ್ರತಿದಿನ 43 ಸಾವಿರ ಮನೆಗಳ ಸಮೀಕ್ಷೆ ಪೂರ್ಣಗೊಳಿಸುವ ಗುರಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಗಣತಿದಾರರಿಗೆ ನೀಡಿದೆ.



### ಸರ್ವೆಗೆ ಆ್ಯಪ್ ಸಹಕರಿಸುತ್ತಿಲ್ಲ

ಗ್ರಾಮೀಣ ಭಾಗದಲ್ಲಿ ನೆಟ್ವರ್ಕ್ ತೊಂದರೆ ವಿಪರೀತವಾಗುತ್ತಿದೆಯೆಂಬ ಕೂಗು ಕೇಳಿಬಂದ ಹಿನ್ನಲೆಯಲ್ಲಿ ಗಂಭೀರವಾಗಿ ಪರಿಗಣಿಸಿದ ಸರ್ಕಾರ ತಕ್ಷಣವೇ ತಾಂತ್ರಿಕ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಂಡಿತ್ತು. ಜೊತೆಗೆ ಶನಿವಾರ ಮತ್ತು ಭಾನುವಾರ ಸರ್ಕಾರಿ ರಜೆ ಇದ್ದುದರಿಂದ ಸರ್ಕಾರಿ ಕಚೇರಿಗಳಲ್ಲಿ ಸರ್ವರ್ ಬಳಕೆ ಕಡಿಮೆಯಿದ್ದರಿಂದ ಗಣತಿದಾರರಿಗೆ ಸಮಸ್ಯೆಯಾಗಿಲ್ಲ. ಸರ್ಕಾರಿ ಕಚೇರಿಗಳು ತೆರೆಯುವುದರಿಂದ ಮತ್ತೆ ಅದೇ ಸಮಸ್ಯೆ ತಲೆದೋರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

### ತಾಲ್ಲೂಕುವಾರು ವಿವರ

ಆಲೂರು ತಾಲ್ಲೂಕಿನಲ್ಲಿ 4343, ಅರಕಲಗೂಡು 10818, ಅರಸೀಕೆರೆ 144445, ಬೇಲೂರು 9486, ಚನ್ನರಾಯಪಟ್ಟಣ 11993, ಹಾಸನ 11870, ಹೊಳೆನರಸೀಪುರ 8691, ಸಕಲೇಶಪುರ ತಾಲ್ಲೂಕಿನಲ್ಲಿ 5117 ಮನೆಗಳಿಗೆ ಗಣತಿದಾರರು ಭೇಟಿ ನೀಡಿದ್ದಾರೆ. ಈ ಕಾರ್ಯಕ್ಕೆ 4897 ಶಿಕ್ಷಕರ ಜೊತೆಗೆ 250 ಸಹಾಯಕರು, 100 ಮಾಸ್ಟರ್ ಟ್ರೈನರ್‌ಗಳು ಹಾಗು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಆಯಾ ಇಲಾಖೆಯ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಭಾನುವಾರ ರಜಾ ದಿನವೂ ಜಿಲ್ಲಾದ್ಯಂತ ಸಿಬ್ಬಂದಿ ಕರ್ತವ್ಯ ನಿರ್ವಹಿಸಿದ್ದಾರೆ.

> ಸರ್ಕಾರಿ ಕಚೇರಿಗಳಿಗೆ ರಜೆ ಇದ್ದರಿಂದ ಎರಡು ದಿನಗಳಿಂದ ಸರ್ವರ್ ಸಮಸ್ಯೆಯಾಗಿಲ್ಲ. ಆರಂಭದಲ್ಲಿ ಉಂಟಾದ ಗೊಂದಲಗಳೆಲ್ಲವೂ ನಿವಾರಣೆಯಾಗಿ ಜಿಲ್ಲಾದ್ಯಂತ ಸುಸೂತ್ರವಾಗಿ ಕಾರ್ಯ ನಡೆಯುತ್ತಿದೆ. ಸೋಮವಾರದಿಂದ ಸರ್ವರ್ ಹೇಗೆ ಕಾರ್ಯನಿರ್ವಹಿಸುತ್ತದೆಂಬುದನ್ನು ನೋಡಬೇಕಿದೆ.
>
> **- ಕುಮಾರ್,**
> **ಹಿಂದುಳಿದ ವರ್ಗಗಳ ಇಲಾಖೆ ಜಿಲ್ಲಾ ಅಧಿಕಾರಿ**

### ಗೃಹಜ್ಯೋತಿ ಕೈ ತಪ್ಪುವ ಭೀತಿ

ರಾಜ್ಯ ಸರ್ಕಾರದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಗೃಹ ಜ್ಯೋತಿ ಬಳಕೆದಾರರ ಮೇಲೆ ಪರಿಣಾಮ ಬೀರಿದೆ. ಗಣತಿಗೆ ಸಹಾಯವಾಗಲೆಂದು ಸೆಸ್ಕಾಂ ಸಿಬ್ಬಂದಿಯನ್ನು ಮನೆ ಮನೆಗೆ ಸ್ಟಿಕ್ಕರ್ ಹಾಗು ಜಿಯೋ ಟ್ಯಾಗ್ ಅಳವಡಿಸುವ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಆ. 23 ರಿಂದ ಸ್ಟಿಕ್ಕರ್ ಅಂಟಿಸುವ ಕಾರ್ಯದಲ್ಲಿದ್ದ ಅವರು ಸಮಯಕ್ಕೆ ಸರಿಯಾಗಿ ವಿದ್ಯುತ್ ರೀಡಿಂಗ್ ಮಾಡದೆ 35 ರಿಂದ 40 ದಿನಗಳ ವರೆಗೆ ಮಾಡಿದ್ದಾರೆ. ಹೀಗಾಗಿ ಕೆಲವು ಮನೆಗಳಿಗೆ 200ಕ್ಕಿಂತ ಅಧಿಕ ಯೂನಿಟ್ ಖರ್ಚಾಗಿದೆ.

ಮೊದಲೆಲ್ಲಾ 200 ಯೂನಿಟ್ ಗಿಂತ ಕಡಿಮೆ ವಿದ್ಯುತ್ ಬಳಸಿದ್ದರೆ ಅಂತವರಿಗೆ ಬಿಲ್ ಬರುತ್ತಿರಲಿಲ್ಲ. ಆದರೆ ಈ ಬಾರಿ ಒಂದು ತಿಂಗಳಷ್ಟಲ್ಲೇ ಅಲ್ಲದೆ ಅಧಿಕ ಅವಧಿಯ ಬಿಲ್ ಬಂದಿರುವುದರಿಂದ ಬಳಕೆಯಾದ ಯೂನಿಟ್ ಪ್ರಮಾಣ ಹೆಚ್ಚಾಗಿದೆ. ಹಾಗಾಗಿ ಅಂತಹ ಕುಟುಂಬಸ್ಥರು ಈ ತಿಂಗಳು ಬಿಲ್ ಪಾವತಿಸುವುದು ಮಾತ್ರವಲ್ಲದೆ ಶಾಶ್ವತವಾಗಿ ಗೃಹಜ್ಯೋತಿ ಯೋಜನೆಯಿಂದ ದೂರವುಳಿಯುವ ಆತಂಕ ಅನೇಕರನ್ನು ಕಾಡುತ್ತಿದೆ.

# ಜಿಲ್ಲಾ ಕ್ರೀಡಾಂಗಣದಲ್ಲಿ ಭಗತ್ ಸಿಂಗ್ ಜನ್ಮ ದಿನಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಸಂಸ್ಥೆ (ಎಐಡಿಎಸ್ಒ) ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಜನ್ಮ ದಿನ ಆಚರಿಸಲಾಯಿತು.

ಎಐಡಿಎಸ್ಒ ಜಿಲ್ಲಾ ಸಂಚಾಲಕಿ ಚೈತ್ರ ಮಾತನಾಡಿ, ಕೇವಲ ಸ್ವಾತಂತ್ರ್ಯ ಪಡೆಯುವುದು ನಮ್ಮ ಉದ್ದೇಶವಲ್ಲ. ಬ್ರಿಟೀಷರಿಂದ ಪಡೆದ ಸ್ವಾತಂತ್ರ್ಯ ದೇಶದ ಕೆಲವು ಶ್ರೀಮಂತ ವರ್ಗಕ್ಕೆ ವರ್ಗಾವಣೆಯಾದರೆ, ಅದು ನಿಜವಾದ ಸ್ವಾತಂತ್ರ್ಯವಾದೀತೆಯೆಂದು ಭಗತ್ ಸಿಂಗ್ ಪ್ರಶ್ನಿಸಿದ್ದರು. ಭಗತ್ ಸಿಂಗ್ ಮಾನವ ಜೀವನವನ್ನು ಪ್ರೀತಿಸಿದರು ಮತ್ತು ಘನತೆ ಎತ್ತಿ ಹಿಡಿದರು. ಇಂದಿಗೂ ದಿನನಿತ್ಯ ಮಾನವರ ಘನತೆಯ ಹರಣವಾಗುತ್ತಿದೆ. ಹೆಣ್ಣು ಮಕ್ಕಳ ಮೇಲೆ ಅವ್ಯಾಹತವಾಗಿ ದೌರ್ಜನ್ಯ ನಡೆಯುತ್ತಿದೆ. ಹಸಿವು, ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳು ಸಮಾಜದಲ್ಲಿ ತಾಂಡವವಾಡುತ್ತಿದೆ. ಬೆರಳೆಣಿಕೆಯ ಕಾರ್ಪೊರೇಟ್ ಮನೆತನಗಳ ಹಿಡಿತದಲ್ಲಿರುವ ದೇಶದ ಬಂಡವಾಳಶಾಹಿ ವ್ಯವಸ್ಥೆಯು ಅವಿಶ್ರಾಂತವಾಗಿ ದುಡಿಯುವ ರೈತ ಕಾರ್ಮಿಕರು ಹಾಗು ಜನಸಾಮಾನ್ಯರ ಬದುಕನ್ನು ಅಸಹನೀಯಗೊಳಿಸಿದೆ ಎಂದರು.




ಕ್ರಾಂತಿಯೆಂದರೆ ಪ್ರಸಕ್ತ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತೊಗೆದು ಸಮಾಜವಾದಿ ವ್ಯವಸ್ಥೆಯ ಸ್ಥಾಪನೆ. ಕೋಮುವಾದವು ಜನಗಳ ಆರ್ಥಿಕ ಪರಿಸ್ಥಿತಿಯೊಂದಿಗೆ ಸಂಬಂಧ ಹೊಂದಿದೆ ಎಂಬುದನ್ನು ಭಗತ್ ಸಿಂಗ್ ಗಮನಿಸಿದರು. ಧರ್ಮವನ್ನು ರಾಜಕೀಯದಿಂದ ಹೊರಗಿಡಬೇಕೆಂದು ಅವರು ಪ್ರತಿಪಾದಿಸಿದ್ದರು ಎಂದರು.

ಶಿಕ್ಷಣದ ವ್ಯಾಪಾರಿಕರಣ, ನಿರುದ್ಯೋಗ, ಹಸಿವು, ಬಡತನ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಮುಂತಾದ ಸಮಸ್ಯೆಗಳನ್ನು ತಡೆಯಲು ಹಾಗೂ ಶಿಕ್ಷಣ-ಮಾನವತೆ-ಸಂಸ್ಕೃತಿ ಉಳಿಸಲು, ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಭಗತ್ ಸಿಂಗ್ ಅವರ ವಿಚಾರಗಳಿಂದ ಸ್ಫೂರ್ತಿ ಪಡೆದು ಸಾರ್ವಜನಿಕ ಶಿಕ್ಷಣವನ್ನು ಉಳಿಸಲು ಮುಂದೆ ಬನ್ನಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಐಡಿಎಸ್ಒ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ, ಕಾರ್ಯಕರ್ತರಾದ ಮಮತಾ, ಪುರುಷೋತ್ತಮ್, ತಿಲಕ್, ನಂದಶ್ರೀ, ಪಲ್ಲವಿ, ಅನನ್ಯ ಹಾಗೂ ಇತರರಿದ್ದರು.

# ಗ್ರಾಮೀಣಾಭಿವೃದ್ಧಿಗಾಗಿ ಯುವ ಜನರನ್ನು ಒಗ್ಗೂಡಿಸಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಜನರ ಸೇವೆಗಾಗಿ ಶ್ರಮಿಸುವ ಯುವ ಜನಾಂಗ ಗ್ರಾಮಗಳ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ವಿಶ್ವ ಗ್ರಾಮೋದಯ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ದಾಸಣ್ಣ ಪಾವಗಡ ಹೇಳಿದರು.

ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಇತ್ತೀಚೆಗೆ ನಡೆದ ವಿಶ್ವ ಗ್ರಾಮೋದಯ ಟ್ರಸ್ಟ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಕಳೆದ 18 ವರ್ಷಗಳಿಂದ ಗ್ರಾಮೀಣಾಭಿವೃದ್ಧಿಯಲ್ಲಿ ಮುಖ್ಯವಾಗಿ ಯುವ ಜನರನ್ನು ಒಗ್ಗೂಡಿಸಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಅನೇಕ ಗ್ರಾಮೀಣ ಪ್ರದೇಶ ಜನರಿಗೆ ಜನಪರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಲ್ಲಿ ಇನ್ನು ಹೆಚ್ಚಿನ ಜನರಿಗೆ ನಮ್ಮ ಸೇವೆ ತಲುಪಿಸಬೇಕಿದೆ ಎಂದರು.

ಯುವ ನಾಯಕ ಲಯನ್ ಶ್ರೀಧರ್ ಅವರು ಮಾತನಾಡಿ, ಟ್ರಸ್ಟ್‌ನ ಕಾರ್ಯಕ್ರಮಗಳನ್ನು ಪ್ರತಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ತಲುಪಿಸಬೇಕು. ಯುವ ಜನರನ್ನು ಸಮಾಜ ಸೇವೆಗೆ ತೊಡಗಿಸಿಕೊಂಡು ಭವಿಷ್ಯದಲ್ಲಿ ಉನ್ನತ ಮಟ್ಟದಲ್ಲಿ ಶಕ್ತಿ ತುಂಬುವ ಕೆಲಸ ಮಾಡಬೇಕೆಂದರು.

ಯುವ ಮುಖಂಡ ಸಂಗಮೇಶ್ ಮಾತನಾಡಿ, ಟ್ರಸ್ಟ್‌ನ ಅಭಿವೃದ್ಧಿಗಾಗಿ ಗ್ರಾಮೀಣ ಪ್ರದೇಶದ ಜನರಿಗೆ ಸೂಕ್ತ ಅವಕಾಶ ಕಲ್ಪಿಸಬೇಕು. ಸರ್ಕಾರದಿಂದ ಸಿಗುವ ಸೌಲಭ್ಯಗಳು ಬಡವರಿಗೆ ತಲುಪಬೇಕೆಂದು ಹೇಳಿದರು.

ವಿಶ್ವ ಗ್ರಾಮೋದಯ ಟ್ರಸ್ಟ್ ಅಧ್ಯಕ್ಷ ಮಹೇಶ್, ಯುವ ಬ್ರಿಗೇಡ್‌ನ ಮುನಿಕುಮಾರ್, ಆನಂದ್ ಸಿ. ತಿರುಮಲ, ಸಂಗಮೇಶ್, ಗುರುಮೂರ್ತಿ, ರಂಗನಾಥ್ ಪತ್ರೊಟಿ ಇತರರಿದ್ದರು.

# ಸಂತೇಶಿವರ ಕೆರೆಯಲ್ಲಿ ಸಾಹಿತಿ ಭೈರಪ್ಪರ ಅಸ್ಥಿ ವಿಸರ್ಜನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಿರಿಯ ಸಾಹಿತಿ ದಿವಂಗತ ಡಾ. ಎಸ್.ಎಲ್. ಭೈರಪ್ಪ ಅವರ ಅಸ್ಥಿ ವಿಸರ್ಜನೆ ಹುಟ್ಟೂರು ಸಂತೇಶಿವರ ಕೆರೆಯಲ್ಲಿ ಭಾನುವಾರ ಸ್ಮಾರ್ಥ ಹಿಂದೂ ಸಂಪ್ರದಾಯದಂತೆ ನೆರವೇರಿತು. ಭೈರಪ್ಪನವರ ಪುತ್ರರಾದ ರವಿಶಂಕರ್ ಹಾಗೂ ಉದಯ ಶಂಕರ್ ಅಸ್ಥಿ ವಿಸರ್ಜನೆ ಮಾಡಿದರು. ಸೆ. 26 ರಂದು ಮೈಸೂರಿನ ಚಾಮುಂಡಿ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿತ್ತು. ಭೈರಪ್ಪನವರ ಆಸೆಯಂತೆ ಹುಟ್ಟೂರಿನಲ್ಲೂ ಧಾರ್ಮಿಕ ಕೈಂಕರ್ಯವನ್ನು ಪುತ್ರರು ಗ್ರಾಮಸ್ಥರ ಸಹಕಾರದಿಂದ ನೆರವೇರಿಸಿದರು.

**ಬ್ರಾಹ್ಮಣ ಸಂಪ್ರದಾಯದ ಪೂಜೆ:** ಪ್ರಭಾಕರ್ ಜೋಯಿಸ್, ಅನಂತರಾಮ ಜೋಯಿಸ್, ವೇಣುಗೋಪಾಲ್, ಎಸ್.ಡಿ. ನಾಗರಾಜ್‌ರಾವ್ ಅವರು ಸ್ವಸ್ತಿಕ್ ಮಂತ್ರ ವೇದ ಘೋಷ ಶಾಂತಿ ಮಂತ್ರ ಸೇರಿ ವಿವಿಧ ಮಂತ್ರಗಳನ್ನು ಪಠಣ ಮಾಡಿ ಪೂಜೆ ನೆರವೇರಿಸಿದರು.



ಡಾ. ಎಸ್.ಎಲ್. ಭೈರಪ್ಪ ಅವರ ಕಿರಿಯ ಪುತ್ರ ಉದಯಶಂಕರ್ ಅವರು ಮೈಸೂರಿನಿಂದ ಅವರ ತಂದೆಯವರ ಚಿತಾಭಸ್ಮ ತಂದಿದ್ದರು. ಅವರನ್ನು ಗ್ರಾಮದ ಪ್ರಾರಂಭದಲ್ಲಿ ಗ್ರಾಮಸ್ಥರು ಹಾಗು ಶಾಸಕ ಸಿ.ಎನ್. ಬಾಲಕೃಷ್ಣ ಬರಮಾಡಿಕೊಂಡರು. ಭೈರಪ್ಪನವರು ಬಾಲ್ಯದಲ್ಲಿ ಈಜಾಡುತ್ತಿದ್ದ ಕೆರೆ ಈಗ ಸುತ್ತಲಿನ 30 ಹಳ್ಳಿಗಳಿಗೆ ಅಂತರ್ಜಲ ಒದಗಿಸುತ್ತಿದೆ. ಕೆರೆ ಭರ್ತಿಗೆ ಕ್ರಮ ಕೈಗೊಳ್ಳಬೇಕೆಂದು ಭೈರಪ್ಪನವರು ಕಳೆದ ಬಿಜೆಪಿ ಸರ್ಕಾರಕ್ಕೆ ಒತ್ತಾಯಿಸಿದ್ದರು. ಅದರಂತೆ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ಅನುದಾನ ಬಿಡುಗಡೆಯಾಗಿ ಕೆರೆ ಭರ್ತಿಯಾಗಿದೆ. ಅದೇ ಕೆರೆಯಲ್ಲಿ ತೆಪ್ಪದಲ್ಲಿ ಸಾಗಿದ ಭೈರಪ್ಪನವರ ಪುತ್ರರು ಅಸ್ಥಿ ವಿಸರ್ಜನೆ ಮೂಲಕ ಗೌರವ ಸಲ್ಲಿಸಿದರು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಮೈಸೂರಿನಲ್ಲಿ ಭೈರಪ್ಪನವರ ಸ್ಮಾರಕ ನಿರ್ಮಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಅದೇ ರೀತಿ ಹುಟ್ಟೂರಿನಲ್ಲಿ ಪ್ರತಿಮೆ, ತಾಲ್ಲೂಕು ಕೇಂದ್ರದಲ್ಲಿ ಅವರ ಹೆಸರಿನಲ್ಲಿ ಸಮುದಾಯ ಭವನ ನಿರ್ಮಿಸಬೇಕು. ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಭೈರಪ್ಪನವರ ಸ್ಮರಣಾರ್ಥ ಪ್ರತಿವರ್ಷ ಹುಟ್ಟೂರಿನಲ್ಲಿ 2 ದಿನ ಸಾಹಿತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಮಾತನಾಡಿ, ವಿಶ್ವ ಮನ್ನಣೆ ಪಡೆದ ಎಸ್.ಎಲ್. ಭೈರಪ್ಪ ನಮ್ಮ ತಾಲ್ಲೂಕಿನವರು ಎನ್ನುವುದು ಹೆಮ್ಮೆಯ ವಿಚಾರವೆಂದರು.

ಡಾ. ಎಸ್.ಎಲ್. ಭೈರಪ್ಪ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಪ್ರೊ. ಶೇಖರ್, ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ರಾಜಣ್ಣ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಟಿಎಪಿಎಂಎಸ್ ನಿರ್ದೇಶಕ ಎಸ್. ಚಿರಂಜೀವಿ ಮಾತನಾಡಿದರು.

ಶ್ರೀ ಗಂಗಾಧರೇಶ್ವರ ಭಜನಾ ಮಂಡಳಿ ಸದಸ್ಯರಿಂದ ಪ್ರತಿಷ್ಠಾನದ ಮುಂಭಾಗ ಭಜನೆ ಕಾರ್ಯಕ್ರಮ ನಡೆಯಿತು. ಬೆಂಗಳೂರು ಗಾಂಧಿ ಪ್ರತಿಷ್ಠಾನದ ಶಿವರಾಜಣ್ಣ, ವೀರಶೈವ ಸಮಾಜದ ಹಿರಿಯರಾದ ದುಗ್ಗೇನಹಳ್ಳಿ ವೀರೇಶ್, ಗ್ರಾಪಂ ಸದಸ್ಯ ಮಧು ಪಟೇಲ್, ಗಂಜಿಗೆರೆ ಕೃಷ್ಣ, ಉದ್ಯಮಿ ಅಣತಿ ಯೋಗೇಶ್, ಮುಖಂಡರಾದ ಜಯ ಲಿಂಗೇಗೌಡ, ಕುಳ್ಳೇಗೌಡ, ರಾಜಣ್ಣ, ಮಂಜುನಾಥ್, ಪುಟ್ಟಸ್ವಾಮಿ, ಹುಲಿಕೆರೆ ಸಂಪತ್ ಕುಮಾರ್, ಸಾವಯವ ಕೃಷಿಕ ಬಸವರಾಜು, ಗುಡಿ ಗೌಡ್ರು ಮನೆ ಗಂಗೇಗೌಡ, ರವೀಶ್, ಜವಳಿ ರಾಜಣ್ಣ, ಅಯ್ನರ್ ಅನಂತ್ ಇತರರಿದ್ದರು. ಎಸ್. ಎಲ್. ಭೈರಪ್ಪನವರ ಪ್ರೀತಿಪಾತ್ರರೂ ಸಹೋದರರು ಆಗಿರುವ ಎಸ್.ಎಲ್. ಕೃಷ್ಣಪ್ರಸಾದ್ ಅವರು ಗೈರಾದರು.

### ಮನ್ ಕಿ ಬಾತ್‌ನಲ್ಲಿ ಭೈರಪ್ಪ ನೆನೆದ ಮೋದಿ

ನವದೆಹಲಿ: ಇತ್ತೀಚೆಗೆ ನಿಧನರಾದ ಸಾಹಿತಿ ಡಾ. ಎಸ್.ಎಲ್. ಭೈರಪ್ಪ ಅವರ ಕೊಡುಗೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಸ್ಮರಿಸಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಡಾ. ಎಸ್. ಎಲ್. ಭೈರಪ್ಪ ಅವರ ಕೊಡುಗೆ ಅಪಾರ. ನಾವಿಂದು ಅವರನ್ನು ಕಳೆದುಕೊಂಡಿದ್ದೇವೆ. ಅವರ ಜೊತೆ ನನಗೆ ಅಪಾರ ಒಡನಾಟವಿತ್ತು. ಕೆಲವು ವಿಷಯಗಳ ಕುರಿತು ನಾನು ಅವರೊಂದಿಗೆ ಚರ್ಚೆ ನಡೆಸಿದ್ದೆ. ಈ ಕಾರ್ಯಕ್ರಮದ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ ಎಂದಿದ್ದಾರೆ.

ಅವರ ಕೃತಿಗಳು ಯುವ ಪೀಳಿಗೆಯ ವಿಚಾರಗಳಿಗೆ ಮಾರ್ಗದರ್ಶನ ನೀಡುತ್ತಿವೆ. ಕನ್ನಡದಲ್ಲಿ ಅವರು ರಚಿಸಿದ ಹಲವು ಕೃತಿಗಳ ಅನುವಾದಗಳು ಕೂಡ ಲಭ್ಯವಿವೆ. ನಮ್ಮ ಮೂಲ ಹಾಗು ಸಂಸ್ಕೃತಿಯ ಬಗ್ಗೆ ಅಭಿಮಾನವನ್ನು ಹೊಂದಿರುವುದು ಎಷ್ಟೊಂದು ಮಹತ್ವಪೂರ್ಣವಾಗಿದೆ ಎಂಬುದನ್ನು ಅವರು ತಿಳಿಸಿದ್ದಾರೆ. ಎಸ್.ಎಲ್. ಭೈರಪ್ಪ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತೇನೆ. ಯುವಕರು ಭೈರಪ್ಪನವರ ಕಾದಂಬರಿ ಓದಬೇಕೆಂದು ಅವರು ಸಲಹೆ ನೀಡಿದ್ದಾರೆ.

# ಹೊಯ್ಸಳೋತ್ಸವಕ್ಕೆ ನವ ಕರ್ನಾಟಕ ಸಂಘಟನೆ ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಯ್ಸಳರ ಕಾಲದ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಪ್ರತಿವರ್ಷ ಹೊಯ್ಸಳೋತ್ಸವ ಆಯೋಜನೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನವ ಕರ್ನಾಟಕ ಯುವ ಶಕ್ತಿ ಸಂಘಟನೆ ರಾಜ್ಯಾಧ್ಯಕ್ಷ ಕೆ.ಎನ್. ಲಿಂಗೇಗೌಡ ಆಗ್ರಹಿಸಿದರು.

ನವ ಕರ್ನಾಟಕ ಯುವ ಶಕ್ತಿ ಸಂಘಟನೆಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಹೊಯ್ಸಳೋತ್ಸವ ಮೆರವಣಿಗೆಗೆ ಬಿಎಂ ರಸ್ತೆಯ ಪೃಥ್ವಿ ಚಿತ್ರಮಂದಿರ ಸಮೀಪ ಚಾಲನೆ ನೀಡಿ ಮಾತನಾಡಿದ ಅವರು, ಹೊಯ್ಸಳ ಉತ್ಸವವೆಂದರೆ ಕೇವಲ ಮನರಂಜನೆಯಲ್ಲ. ಮುಂದಿನ ಪೀಳಿಗೆಗೆ ನಾಡಿನ ಶ್ರೇಷ್ಠ ಪರಂಪರೆ, ಕಲೆ ಮತ್ತು ಸಂಸ್ಕೃತಿ ಪರಿಚಯಿಸುವ ಪ್ರಯತ್ನವೂ ಆಗಲಿದೆಯೆಂದರು.

11ನೇ ಶತಮಾನದಿಂದ 16ನೇ ಶತಮಾನದವರೆಗೆ ಹೊಯ್ಸಳರ ಆಳ್ವಿಕೆ ಅಮೋಘವಾಗಿತ್ತು. ದಕ್ಷಿಣ ಭಾರತವನ್ನು ವ್ಯಾಪಿಸಿದ್ದ ಸಾಮ್ರಾಜ್ಯ ಸಂಸ್ಕೃತಿ, ಕಲೆಗೆ ಪ್ರಸಿದ್ಧವಾಗಿತ್ತು. ಹೊಯ್ಸಳ ಸಾಮ್ರಾಟರು ಈ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಬೇಲೂರು, ಹಳೇಬೀಡು, ಸೋಮನಾಥಪುರ ಸೇರಿ 25ಕ್ಕೂ ಹೆಚ್ಚು ಜಗತ್ತಿನಲ್ಲಿ ಇಲ್ಲವಾದಂತಹ ವೈವಿಧ್ಯಮಯ ಸೂಕ್ಷ್ಮ ಕಲ್ಲಿನ ಕೆತ್ತನೆ ವಾಸ್ತುಶಿಲ್ಪ ಹೊಂದಿರುವಂತಹ ಅದ್ಭುತವಾದ ಕೊಡುಗೆಯನ್ನು ಸಂರಕ್ಷಣೆ ಮಾಡಬೇಕೆಂದು ಆಗ್ರಹಿಸಿದರು.

ಪುರಾತನ ವೈಭವ ಉಳಿಸಬೇಕಾದರೇ ಅದಕ್ಕೊಂದು ಪ್ರಾಧಿಕಾರ ಅಸ್ತಿತ್ವಕ್ಕೆ ಬರಬೇಕು. ಬೇಲೂರು- ಹಳೇಬೀಡು ದೇವಸ್ಥಾನಗಳು ಕೇವಲ ದೇವಾಲಯಗಳಲ್ಲ. ಅದು ಕನ್ನಡ ನಾಡಿನ ಕಾವ್ಯ. ಕಲ್ಲಿನಲ್ಲಿ ಕೆತ್ತಿರುವ ಕಾವ್ಯ. ಆ ಕಾವ್ಯಕ್ಕೊಸ್ಕರ ಹೊಯ್ಸಳ ಉತ್ಸವವನ್ನು ಸರ್ಕಾರ ಮಾಡಬೇಕೆಂದು ಹೇಳಿದರು.

ನವ ಕರ್ನಾಟಕ ಯುವಶಕ್ತಿ ರಾಜ್ಯ ಉಪಾಧ್ಯಕ್ಷ ಶಂಕರ್ ಗೌಡ, ಜಿಲ್ಲಾಧ್ಯಕ್ಷ ಬಿ.ಆರ್. ನಂದೀಶ್, ಉದ್ಯಮ ಘಟಕದ ರಾಜ್ಯಾಧ್ಯಕ್ಷ ಸಂದೇಶ್ ಶೆಟ್ಟಿ, ಕೃಷ್ಣಪ್ಪ, ಸಂತೋಷ್ ಗೌಡ, ಪವನ್ ಶೆಟ್ಟಿ, ಆಟೋ ಘಟಕದ ಜಾನು, ಹರೀಶ್ ಗೌಡ ಹಾಗೂ ಇತರರಿದ್ದರು.

# ಕಷ್ಟದಲ್ಲಿರುವವರಿಗೆ ಸ್ಪಂದಿಸುವ ಗುಣ ಬೆಳೆಸಿಕೊಳ್ಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಅಸಹಾಯಕರ ನೋವಿಗೆ ಸ್ಪಂದಿಸುವ ಸದ್ಗುಣವನ್ನು ಮನುಷ್ಯ ಬೆಳೆಸಿಕೊಳ್ಳಬೇಕೆಂದು ಸಂಗೀತ ವಿದ್ವಾನ್ ಆರ್.ಕೆ. ಪದ್ಮನಾಭ ಹೇಳಿದರು.

ಪಟ್ಟಣ ಹೊರ ವಲಯದ ಶಂಭುನಾಥಪುರದಲ್ಲಿರುವ ಮಧುಶ್ರೀ ವೃದ್ಧಾಶ್ರಮದಲ್ಲಿ ವೃದ್ಧರಿಗೆ ವಿವಿಧ ಸವಲತ್ತು ವಿತರಿಸಿ ಇತ್ತಿಚೆಗೆ ತಮ್ಮ 76ನೇ ಜನ್ಮ ದಿನ ಆಚರಿಸಿಕೊಂಡು ಮಾತನಾಡಿದ ಅವರು, ಬದುಕು ನಶ್ವರ, ಆಸ್ತಿ, ಅಂತಸ್ತು ಗಳಿಸುವುದರಲ್ಲೇ ಕಳೆಯದೇ ಸಂಪಾದನೆಯ ಕೆಲ ಭಾಗವನ್ನು ಅಸಹಾಯಕರಿಗೆ ಹಂಚುವ ಗುಣ ಬೆಳೆಸಿಕೊಳ್ಳಬೇಕು ಎಂದರು.



ಗ್ರಾಮೀಣ ಪ್ರದೇಶದಲ್ಲಿ ವೃದ್ಧಾಶ್ರಮಗಳನ್ನು ಮುನ್ನಡೆಸುವುದು ಕಷ್ಟದ ಕೆಲಸ. ಆದರೆ ಬಡ ಜನರ ಸೇವೆಯೇ ದೇವರ ಸೇವೆ ಎಂಬುದನ್ನು ಮನಗಂಡು ಸಾವಿತ್ರಮ್ಮ, ಮಧು ಮತ್ತು ಪ್ರಕಾಶ್ ಅವರು ತಮ್ಮ ನಿಷ್ಕಲ್ಮಶ ಪ್ರೀತಿಯ ಭಾವನೆಗಳನ್ನು ಮೈಗೂಡಿಸಿಕೊಂಡು ವೃದ್ಧಾಶ್ರಮ ತೆರೆದು ಅನೇಕ ವೃದ್ಧರಿಗೆ ಪ್ರತಿದಿನ ಊಟೋಪಚಾರ, ವೈದ್ಯಕೀಯ ಸೇವೆ ನೀಡುತ್ತಾ ದೇವರನ್ನು ಕಾಣುತ್ತಿದ್ದಾರೆ. ಯೌವನ ನಿರಂತರವಾಗಿ ಉಳಿಯುವುದಿಲ್ಲ ಎನ್ನುವ ಸತ್ಯ ಅರಿತು ವೃದ್ಧರ ಕಷ್ಟಕ್ಕೆ ಮಿಡಿಯುತ್ತಿರುವ ಜೀವಗಳಿಗೆ ದೇವರ ಆಶೀರ್ವಾದ ಸದಾ ಇರುತ್ತದೆ. ಈ ಆಶ್ರಮಕ್ಕೆ ಪ್ರತಿವರ್ಷ 10 ಸಾವಿರ ರೂ. ನಗದು ನೀಡುತ್ತೇನೆ. ಇದೀಗ ವೃದ್ಧರಿಗೆ ಬೆಚ್ಚನೆಯ ಬೆಡ್ ಶಿಟ್ ಹೊದಿಕೆ, ಟೋಪಿ, ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಸಂಗೀತ ಹಾಗು ದೇವರ ಸ್ಮರಣೆ ಆಲಿಸಲು ಸ್ಪೀಕರ್ ಯಂತ್ರ, ರಾಮಾಯಣ, ಮಹಾಭಾರತ ಪುಸ್ತಗಳನ್ನು ನೀಡಿರುವೆ ಎಂದರು.

ಸಂಗೀತ ವಿದ್ವಾನ್ ಆರ್.ಕೆ.ಪಿ. ಬಳದ ರಮೇಶ್ ವಾಟಾಳ್, ಪ್ರವೀಣ್, ಗುರು, ನಾಗೇಶ್, ಯತಿರಾಜ್, ಪುನೀತ್ ಗೌಡ, ಆಟೋ ಧರ್ಮ, ವಿಜಿ, ಮಂಜು, ನರಸಿಂಹ, ನಾಗೇಂದ್ರ, ರವಿವರ್ಧನ್, ಧನಂಜಯ, ನಟರಾಜ್, ವಿನೋದ್ ಕುಮಾರ್, ಸುರೇಶ್, ಚಂದ್ರು ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-30

1791: ಫ್ರಾನ್ಸ್‌ನಲ್ಲಿ ಮೊದಲ ಬಾರಿಗೆ ವಿಧಾನಸಭೆ ಸಭೆ ಸೇರಿತು.

1882: ಅಮೆರಿಕಾದಲ್ಲಿ ಥಾಮಸ್ ಎಡಿಸನ್ ವಿದ್ಯುತ್ ದೀಪವನ್ನು ವಾಣಿಜ್ಯ ಬಳಕೆಗೆ ತಂದರು.

1932: ಬ್ರಿಟನ್ ದೇಶದಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳಿಗೆ ಮತದಾನ ಹಕ್ಕು ನೀಡುವ ಕಾನೂನು ಜಾರಿಗೆ ಬಂತು.

1947: ಪಾಕಿಸ್ತಾನದ ಪ್ರಧಾನ ಮಂತ್ರಿಯಾಗಿ ಲಿಯಾಗತ್ ಅಲಿ ಖಾನ್ ಅಧಿಕಾರ ಸ್ವೀಕರಿಸಿದರು.

1954: ಪಶ್ಚಿಮ ಜರ್ಮನಿಯಲ್ಲಿ ಪ್ರಸಿದ್ಧ ಕಾರು ತಯಾರಿಕಾ ಸಂಸ್ಥೆ ಮರ್ಸಿಡಿಸ್-ಬೆನ್ಜ್ 300 ಬಿಡುಗಡೆ.

1966: ಬೋಟ್ಸ್ವಾನಾ ದೇಶವು ಬ್ರಿಟಿಷರಿಂದ ಸಂಪೂರ್ಣ ಸ್ವಾತಂತ್ರ್ಯ ಪಡೆದಿತು.

2004: ಇಂಟರ್‌ನೆಟ್ ಬ್ರೌಸರ್ ಮೋಜಿಲ್ಲಾ ಫೈರ್‌ಫಾಕ್ಸ್ 1.0 ಬಿಡುಗಡೆಯಾಯಿತು.

### ಜನನ

1207: ಜಲಾಲುದ್ದೀನ್ ರೂಮಿ, ಪ್ರಸಿದ್ಧ ಪರ್ಷಿಯನ್ ಕವಿ, ತತ್ವಜ್ಞ, ಸೂಫಿ ಸಂತ

1870: ಜನರಲ್ ಬಿ.ಎಂ. ಕಾವೂರಿ, ಭಾರತದ ಸ್ವಾತಂತ್ರ್ಯ ಹೋರಾಟಗಾರ

1924: ಟ್ರೂಮನ್ ಕಾಪೋಟ್, ಅಮೆರಿಕದ ಕಾದಂಬರಿಕಾರ

1933: ಎಲಿಯ ಹುಬ್ಬರ್ಡ್, ಖ್ಯಾತ ಸಂಗೀತಜ್ಞ

1951: ಬಾರಿಯೆಲ್ ಹೋಯ್ನ್, ಅಮೆರಿಕನ್ ಸಂಗೀತ ನಿರ್ದೇಶಕ

### ಮರಣ

1955: ಜೇಮ್ಸ್ ಡೀನ್, ಅಮೆರಿಕದ ಪ್ರಸಿದ್ಧ ಹಾಲಿವುಡ್ ನಟ

2015: ಕಾಳು ಭೈರವ, ಖ್ಯಾತ ಸಂಗೀತ ನಿರ್ದೇಶಕ

# ಧಾರಾಕಾರ ಮಳೆಗೆ ಮನೆ ಗೋಡೆ ಕುಸಿತ

ಸಕಲೇಶಪುರ: ತಾಲ್ಲೂಕಿನಾದ್ಯಂತ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಾಣದಹೊಳೆ ಗ್ರಾಮದ ಸರೋಜಮ್ಮ ಅವರ ಮನೆ ಗೋಡೆ ಕುಸಿದಿದ್ದು ತೊಂದರೆಗೆ ಸಿಲುಕಿದ್ದಾರೆ. ಇಬ್ಬರು



ಮಕ್ಕಳೊಟ್ಟಿಗೆ ಸರೋಜಮ್ಮ ವಾಸಿಸುತ್ತಿದ್ದರು. ಕೂಲಿ ಕೆಲಸ ಮಾಡಿಕೊಂಡಿರುವ ಮಹಿಳೆ ಹಲವು ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡಿದ್ದಾರೆ. ಜೀವನಕ್ಕೆ ಆಧಾರವಾಗಿದ್ದ ಮನೆ ಕುಸಿದು ವಾಸಿಸಲು ಸ್ಥಳವಿಲ್ಲದಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ ಪರಿಹಾರ ಕಲ್ಪಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

# ಪ್ರತ್ಯೇಕ ಅಪಘಾತದಲ್ಲಿ ಇಬ್ಬರ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ : ಕೆಎಸ್ಆರ್‌ಟಿಸಿ ಐರಾವತ ಬಸ್ ಡಿಕ್ಕಿಯಾಗಿ ಗೂಡ್ಸ್ ವಾಹನ ಚಾಲಕ ಮೃತಪಟ್ಟಿರುವ ಘಟನೆ ಸಕಲೇಶಪುರ ತಾಲ್ಲೂಕು ಆನೆಮಹಲ್ ಸಮೀಪ ನಡೆದಿದೆ. ಬೆಂಗಳೂರು ಮೂಲದ ಹರೀಶ್ ಮೃತರು.

ಬಸ್ ಚಾಲಕ ಯಲ್ಲಪ್ಪ ಶಂಕರಪ್ಪ ಹೊಸಕೋರಿ ಅವರು ಕುಂದಾಪುರದಿಂದ ಬೆಂಗಳೂರಿಗೆ ಬರುತ್ತಿದ್ದಾಗ ಆನೆಮಹಲ್ ಗ್ರಾಮದ ದರ್ಗಾ ಹತ್ತಿರ ಎದುರಿನಿಂದ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಚಾಲಕ ಹರೀಶ್ ಹಾಗೂ ಮತ್ತೊಬ್ಬ ಸುನಿಲ್‌ಕುಮಾರ್ ಎಂಬುವರಿಗೆ ಗಂಭೀರ ಗಾಯಗಳಾಗಿದ್ದವು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಹರೀಶ್ ಮೃತಪಟ್ಟಿದ್ದಾರೆ. ಸಕಲೇಶಪುರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ತಾಲ್ಲೂಕು ಕಲ್ಲೇನಹಳ್ಳಿ ಇಟ್ಟಿಗೆ ಫ್ಯಾಕ್ಟರಿ ಸಮೀಪ ನಡೆದಿದೆ. ಮಾಕವಳ್ಳಿ ಗ್ರಾಮದ ನವೀನ್ ಮೃತರು. ಶುಕ್ರವಾರ ಮಧ್ಯಾಹ್ನ ಬೈಕ್‌ನಲ್ಲಿ ಹಂಗರಹಳ್ಳಿ-ಹಾಸನ ರಸ್ತೆಯಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿ ಮೃತಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248